# ಸಂಪಾದಕೀಯ

## ಜ್ಞಾನಮೀಮಾಂಸೆ

**ಮ**ನುಷ್ಯನ ಮುಖ್ಯ ಮೂರು ಹಂಬಲಗಳೆಂದರೆ ಉಳಿವು, ತಿಳಿವು ಮತ್ತು ನಲಿವು. ಪ್ರತಿಯೊಬ್ಬನೂ ತಾನಿರಬೇಕು, ಉಳಿಯಬೇಕು ಎಂದು ಹಂಬಲಿಸುತ್ತಾನೆ. ವಿಶೇಷ ಸಂದರ್ಭಗಳಲ್ಲಿ ಹೊರತಾಗಿ ಯಾರೂ ಮೃತ್ಯುವನ್ನು ಬಯಸುವುದಿಲ್ಲ ಅಥವಾ ತಾನಿಲ್ಲವಾಗುವುದನ್ನು ಬಯಸುವುದಿಲ್ಲ—ಮೃತ್ಯುವಿನ ನಂತರವೂ ತಾನಿರಬೇಕೆಂದು (ಕೊನೆಯ ಪಕ್ಷ ತನ್ನ ಹೆಸರಾದರೂ) ಹಂಬಲಿಸುತ್ತಾನೆ. ಸುಮ್ಮನೆ ಇರುವುದು ಮಾತ್ರವಲ್ಲ ಸುಖದಿಂದಿರಬೇಕೆಂದು ಬಯಸುತ್ತಾನೆ. ಯಾರೂ ದುಃಖವನ್ನು ಬಯಸುವುದಿಲ್ಲ. ಆ ರೀತಿ ಬಯಸುವ ಕೆಲವರಿಗೆ ದುಃಖವೂ ಸುಖವಾಗಿ ಪರಿಣಮಿಸಿರುತ್ತದೆ. ಇನ್ನೊಂದು ಮುಖ್ಯ ಹಂಬಲ ತಿಳಿವು—ಜ್ಞಾನಾಂಕಾಕ್ಷೆ. ತುಂಬ ದಡ್ಡನೂ ಕೂಡ ಜ್ಞಾನವನ್ನು ಬಯಸುತ್ತಾನೆ. ಜ್ಞಾನವಿಲ್ಲದೆ ಬದುಕೇ ಅಸಾಧ್ಯ.

> **ಇಂದ್ರಿಯಸುಖವೇ ಮಾನವನ ಗುರಿ ಎಂದು ತಿಳಿಯುವುದು ಮೂರ್ಖತನ.... ಜ್ಞಾನವೇ ಎಲ್ಲ ಜೀವನದ ಗುರಿ.**
>
> *—ಸ್ವಾಮಿ ವಿವೇಕಾನಂದ.*

### ಸಾಮಾನ್ಯ ಮತ್ತು ವಿಶೇಷ

ಈ ಜ್ಞಾನ ಎಂದರೆ ಏನು? ನಾನೊಂದು ವಸ್ತುವನ್ನು ನೋಡುತ್ತೇನೆ. ಅದು ನನಗೆ ಸಂಪೂರ್ಣ ಅಪರಿಚಿತ ವಸ್ತುವಾಗಿದ್ದರೆ "ಅದು ಯಾವುದೊ ಒಂದು ವಸ್ತು" ಎಂದು ಹೇಳುತ್ತೇನೆ. ಅದು ಯಾವ ವಸ್ತು ಎಂದು ತಿಳಿಯದಿದ್ದರೂ ಅದು ಒಂದು ವಸ್ತು ಎಂದು ತಿಳಿಯುತ್ತದೆ. ಇದು **ವಸ್ತುಜ್ಞಾನ**. ಅಂದರೆ ಆ ವಸ್ತುವನ್ನು ಸಾಮಾನ್ಯ ವಸ್ತುವಿನ ಗುಂಪಿಗೆ ಸೇರಿಸುತ್ತೇನೆ. ಈಗ ನಾನು ಅದರ ಹತ್ತಿರ ಹೋದಾಗ ಅದೊಂದು ಗಿಡ ಎಂದು ಗೊತ್ತಾಗುತ್ತದೆ. ಅದನ್ನು ಈಗ ಸಸ್ಯ ವರ್ಗಕ್ಕೆ ಸೇರಿಸುತ್ತೇನೆ. ಇನ್ನೂ ಹತ್ತಿರ ಹೋಗಿ ಪರೀಕ್ಷಿಸಿದಾಗ ಅದು ಮಾವಿನ ಗಿಡ ಎಂದು ತಿಳಿಯುತ್ತದೆ. ಈಗ ಅದನ್ನು ಮಾವಿನ ಗುಂಪಿಗೆ ಸೇರಿಸುತ್ತೇನೆ. ಮೊದಲು ಒಂದು ಸಾಮಾನ್ಯ ವಸ್ತುವಾಗಿ ಕಂಡದ್ದು ಈಗ ಒಂದು ವಿಶೇಷ ವಸ್ತುವಾಗಿದೆ. ಹೀಗೆ ಸಾಮಾನ್ಯದಿಂದ ವಿಶೇಷಕ್ಕೆ ಬರುವುದೇ ಜ್ಞಾನ. ಈ ರೀತಿ ವಿಶೇಷಕ್ಕೆ ಬರುವಾಗ ನಾವು ವಸ್ತುಗಳನ್ನು ವರ್ಗೀಕರಿಸುತ್ತ ಬರುತ್ತೇವೆ. ಆದ್ದರಿಂದ ಸ್ವಾಮಿ ವಿವೇಕಾನಂದರು "**ವರ್ಗೀಕರಣವೇ ಜ್ಞಾನ**" ಎನ್ನುತ್ತಾರೆ. ಇದು ಒಂದು ವಿಧಾನ.

ಈಗ ಒಂದು ವಸ್ತುವನ್ನು ತೆಗೆದುಕೊಂಡು ವಿಶ್ಲೇಷಿಸುತ್ತ ಹೋದರೆ ಕ್ರಮೇಣ ಅದರ ವಿಶೇಷತೆಯೆಲ್ಲ ಹೊರಟುಹೋಗಿ ಏಕತೆಯಲ್ಲಿ ಕರಗಿಹೋಗುತ್ತದೆ. ಒಂದು ಮರದ ಕುರ್ಚಿಯನ್ನು ವಿಶ್ಲೇಷಿಸಿದರೆ ಮೊದಲು ಅದು ಮರವೆಂಬ ಸಾಮಾನ್ಯದಲ್ಲಿ ಒಂದಾಗುತ್ತದೆ. ಮರವನ್ನು ವಿಶ್ಲೇಷಿಸಿದರೆ ಅದು ಕೆಲವು ಮೂಲವಸ್ತುಗಳ ಸಂಯೋಗವಾಗಿ ಕಂಡುಬರುತ್ತದೆ. ಆ ಮೂಲವಸ್ತುಗಳನ್ನು ವಿಶ್ಲೇಷಿಸಿದರೆ ಅವು ಪರಮಾಣುಗಳಲ್ಲಿಯೂ, ಪರಮಾಣುಗಳು ಶಕ್ತಿಮೂಲದಲ್ಲಿಯೂ ಪರ್ಯವಸಾನಗೊಳ್ಳುತ್ತವೆ. ಇದಕ್ಕೂ ಹಿಂದೆ ಇರುವುದು ವಿಶ್ವಚೈತನ್ಯ. ಹೀಗೆ ಯಾವುದೇ ವಸ್ತುವನ್ನು ವಿಶ್ಲೇಷಿಸುತ್ತ ಹೋದರೂ ನಾವು ಏಕತೆಯಲ್ಲಿ ಕೊನೆಗೊಳ್ಳುತ್ತೇವೆ. ಆದ್ದರಿಂದಲೇ ಸ್ವಾಮೀಜಿ "**ಎಲ್ಲ ಜ್ಞಾನದ ಗುರಿಯೂ ಏಕತೆ**" ಎಂದರು.

### ಜ್ಞಾನ ಆಂತರಿಕವಾದುದು

ವಿವೇಕಾನಂದರ ಪ್ರಕಾರ, ವೇದಾಂತದ ಪ್ರಕಾರವೂ, ಜ್ಞಾನ ನಮ್ಮೊಳಗೇ ಇರುವಂತಹುದು. ಅದನ್ನು ಹೊರಗಿನಿಂದ ಪಡೆಯಲಾಗುವುದಿಲ್ಲ. ಸಾಮಾನ್ಯ ದೃಷ್ಟಿಯಲ್ಲಿ ನೋಡಿದಾಗ ಜ್ಞಾನ ಹೊರಗಡೆಯಿಂದ ಬರುತ್ತದೆ ಎಂದು ನಮಗನಿಸುತ್ತದೆ. ಉಪಾಧ್ಯಾಯರಿಂದ, ಇತರ ವ್ಯಕ್ತಿಗಳಿಂದ, ಗ್ರಂಥಗಳಿಂದ, ಇನ್ನೂ ಬೇರೆ ಬೇರೆ ಮಾಧ್ಯಮಗಳಿಂದ ನಾವು ಜ್ಞಾನವನ್ನು ಸಂಪಾದಿಸುತ್ತೇವೆ. ಆದರೆ ನಿಜವಾಗಿಯೂ ಈ ಎಲ್ಲ ಮಾಧ್ಯಮಗಳೂ ಆಂತರಿಕ ಜ್ಞಾನೋತ್ಪತ್ತಿಗೆ ಪೂರಕಗಳು. ಹೊರಗಡೆ ಇರುವುದು ಕೇವಲ ವಸ್ತುಗಳು ಅಷ್ಟೆ, ಆದರೆ ಜ್ಞಾನ ಉಂಟಾಗುವುದು ಆಂತರ್ಯದಲ್ಲಿ—ಹೊರಗಿನ ವಸ್ತುಗಳು ಕೇವಲ ಪ್ರಚೋದನೆ ನೀಡುತ್ತವೆ. ನಾವು ಒಂದು ವಸ್ತುವನ್ನೊ ಘಟನೆಯನ್ನೊ ನೋಡಿದಾಗ ಆ ವಸ್ತು ಅಥವಾ ಘಟನೆಯ ಬಗ್ಗೆ ವಿವಿಧ ಬಗೆಯ ಜ್ಞಾನವುಂಟಾಗುವುದು ಮನಸ್ಸಿನಲ್ಲಿ. ಆ ಜ್ಞಾನ ವಸ್ತುವಿನಲ್ಲಾಗಲಿ ಘಟನೆಯಲ್ಲಾಗಲಿ ಇರುವುದಿಲ್ಲ. ಒಳಗಿನ ಸ್ಮೃತಿರೂಪದ ಜ್ಞಾನದೊಡನೆ ಹೊರಗಿನಿಂದ ಬರುವ ಸಂವೇದನೆಯೂ ಸೇರಿ ಹೊಸ ಜ್ಞಾನ ಉಂಟಾಗುತ್ತದೆ. ಆದ್ದರಿಂದ ಜ್ಞಾನಪ್ರಕ್ರಿಯೆ ನಡೆಯುವುದು ಅಂತರಂಗದಲ್ಲಿ—ಹೊರಗಿನಿಂದ ತರಕಾರಿ ಬೇಳೆ ಮುಂತಾದವುಗಳನ್ನು ತಂದು, ಒಳಗಿರುವ ಮಸಾಲೆಯನ್ನು ಸೇರಿಸಿ ಪಾಕಶಾಲೆಯ ಒಳಗೆ ಅಡುಗೆ ನಡೆಯುವಂತೆ. ನರಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ, ಮೆದುಳಿನ ಕೇಂದ್ರಗಳು ಇಂದ್ರಿಯ ಸಂವೇದನೆಗಳನ್ನು ತೆಗೆದುಕೊಂಡು, ಅವುಗಳನ್ನು ನೆನಪಿನಲ್ಲಿರುವ ಮಾಹಿತಿಗಳೊಡನೆ

ಹೋಲಿಸಿ ನ್ಯೂರಾನುಗಳ ಮೂಲಕ ಹೊಸ ಹೊಸ ಸಂಪರ್ಕಗಳನ್ನು ಏರ್ಪಡಿಸುತ್ತವೆ. ಈ ಸಂಪರ್ಕಗಳನ್ನೇ ನಾವು ಜ್ಞಾನವೆಂದು ಕರೆಯುವುದು.

ನಾವೊಂದು ಪುಸ್ತಕವನ್ನು ಓದುತ್ತಿರುವಾಗ ಪಠ್ಯವಿಷಯವು, ನೆನಪಿನ ಕೇಂದ್ರವನ್ನೂ ಸೇರಿದಂತೆ, ಮೆದುಳಿನ ಅನೇಕ ಕೇಂದ್ರಗಳನ್ನು ಪ್ರಚೋದಿಸುತ್ತದೆ. ಇದರಿಂದ ನ್ಯೂರಾನುಗಳು ತ್ವರಿತ ಗತಿಯಲ್ಲಿ ಚಲಿಸತೊಡಗಿ ಹೊಸ ಹೊಸ ಸಂಪರ್ಕಗಳನ್ನು ನಿರ್ಮಿಸತೊಡಗುತ್ತವೆ. ಆಗ ನಮಗೆ ಓದಿದ್ದು ಅರ್ಥವಾಗುತ್ತ ಹೋಗುತ್ತದೆ. ಎಲ್ಲಿ ಸಂಪರ್ಕ ಕಡಿದು ಹೋಗುವುದೊ ಅಥವಾ ಏರ್ಪಡುವುದಿಲ್ಲವೊ ಆಗ ಆ ವಾಕ್ಯ ನಮಗೆ ಅರ್ಥವಾಗುವುದೇ ಇಲ್ಲ. ಕೆಲವೊಮ್ಮೆ ತಪ್ಪು ಸಂಪರ್ಕದಿಂದ ತಪ್ಪು ಅರ್ಥವಾಗುವ ಸಂಭವವೂ ಉಂಟು. ಇದು ದೂರವಾಣಿಯ ತಪ್ಪು ಸಂಪರ್ಕದಿಂದ ಯಾವುದೊ ನಂಬರಿಗೆ ಫೋನ್ ಮಾಡಿದರೆ ಅದು ಬೇರೆ ಯಾರಿಗೊ ಹೋಗುವಂತೆ.

### ಆತ್ಮದ ಬೆಳಕೇ ಜ್ಞಾನ

ಎಲ್ಲ ಜ್ಞಾನವೂ ಮಾನಸಿಕ ವೃತ್ತಿಗಳ ಮೂಲಕವೇ ಉಂಟಾಗುವಂತಹದು. ಯೋಗಶಾಸ್ತ್ರದ ಒಂದು ಪ್ರಸಿದ್ಧ ಹೇಳಿಕೆ, **ಏಕಮೇವ ದರ್ಶನಂ, ಖ್ಯಾತಿರೇವ ದರ್ಶನಂ**—"ವೃತ್ತಿಜ್ಞಾನವೊಂದೇ ನಿಜವಾದ ಜ್ಞಾನ"—ಎಂಬುದೂ ಇದನ್ನೇ ಪ್ರತಿಪಾದಿಸುತ್ತದೆ. ನಾವು ಒಂದು ಹೊರಗಿನ ವಸ್ತುವನ್ನು ನೋಡುವುದೆಂದರೆ, ಆ ವಸ್ತುವಿನ ಪ್ರತಿನಿಧಿರೂಪವಾದ ಮಾನಸಿಕ ವೃತ್ತಿಯನ್ನು ನೋಡುವುದು. ವಸ್ತುವಿಗೆ ಸಂಬಂಧಪಟ್ಟ ಸಂವೇದನೆಗಳು ಇಂದ್ರಿಯಗಳ ಮೂಲಕ ಮನಸ್ಸಿಗೆ ಹೋಗಿ ತತ್ಸಂಬಂಧಿಯಾದ ವೃತ್ತಿಯನ್ನು ಮನಸ್ಸಿನಲ್ಲಿ ಉಂಟುಮಾಡುತ್ತವೆ. ನಾವು ಆ ವೃತ್ತಿಯನ್ನು ನೋಡಿ ವಸ್ತುವನ್ನು ನೋಡುತ್ತಿರುವುದಾಗಿ ತಿಳಿಯುತ್ತೇವೆ. ನಮಗುಂಟಾಗುವ ಎಲ್ಲ ಜ್ಞಾನವೂ ವೃತ್ತಿಜ್ಞಾನವೇ.

> **ಪ್ರಕೃತಿಯಲ್ಲಿ ಜ್ಞಾನವೆಂಬುದಿಲ್ಲ. ಜ್ಞಾನವೆಲ್ಲವೂ ಮಾನವನ ಅಂತರಾತ್ಮನಿಂದ ಬರುವಂತಹುದು.**
> —*ಸ್ವಾಮಿ ವಿವೇಕಾನಂದ.*

ಈ ವೃತ್ತಿಯನ್ನು ಬೆಳಗುವುದು ಯಾವುದು? ಬಾಹ್ಯವಸ್ತುವನ್ನು ಬೆಳಗಲು ಹೊರಗಿನ ಬೆಳಕಿದೆ. ಈ ಆಂತರಿಕ ವೃತ್ತಿಯನ್ನು ಬೆಳಗುವ ಆಂತರಿಕ ಬೆಳಕಾವುದು? ಇದೇ ಆತ್ಮದ ಬೆಳಕು—ಪ್ರಜ್ಞಾ ಬೆಳಕು. ಈ ಬೆಳಕು ವೃತ್ತಿಗಳ ಮೂಲಕ ಪ್ರತಿಬಿಂಬಿತವಾದಾಗ ನಮಗೆ ಜ್ಞಾನವುಂಟಾಗುತ್ತದೆ. ಅಂದರೆ ನಿಜವಾದ ಜ್ಞಾನ ಆತ್ಮದ ಬೆಳಕೇ. ಬಾಹ್ಯ ವಸ್ತುಗಳನ್ನು ನೋಡುವಾಗ ಬೆಳಕು ವಸ್ತುಗಳ ಮೂಲಕ ಪ್ರತಿಬಿಂಬಿತವಾಗಿ ಕಣ್ಣನ್ನು ತಲುಪುತ್ತದೆ. ಅಂದರೆ ವಸ್ತುವನ್ನು ನೋಡುವುದೆಂದರೆ ಬೆಳಕನ್ನು ನೋಡುವುದೇ ಆಗಿರುತ್ತದೆ. ಹಾಗೆಯೇ ವೃತ್ತಿಜ್ಞಾನವೆಂದರೆ ಆತ್ಮದ ಬೆಳಕನ್ನು ನೋಡುವುದೇ ಆಗಿದೆ. ಆದ್ದರಿಂದ ಎಲ್ಲ ಜ್ಞಾನಗಳ ಮೂಲಕವೂ ಆತ್ಮನೇ ಪ್ರಕಾಶಿಸುತ್ತಿರುವುದು. ಇದನ್ನೇ ಕೇನೋಪನಿಷತ್ತು ಹೀಗೆ ಹೇಳುತ್ತದೆ: **ಪ್ರತಿಬೋಧವಿದಿತಂ ಮತಂ ಅಮೃತತ್ವಂ ಹಿ ವಿಂದತೇ** —"ಯಾವಾಗ ಆತ್ಮವು ಪ್ರತಿ ಅರಿವಿನಲ್ಲಿಯೂ ತಿಳಿಯಲ್ಪಡುತ್ತದೆಯೋ ಆಗ ತಿಳಿದಂತಾಗುತ್ತದೆ." ದಕ್ಷಿಣಾಮೂರ್ತಿ ಸ್ತೋತ್ರದ ಒಂದು ಹೇಳಿಕೆ ಹೀಗಿದೆ:

**ನಾನಾ ಛಿದ್ರ ಘಟೋದರಸ್ಥಿತ ಮಹಾದೀಪಪ್ರಭಾ ಭಾಸ್ವರಂ ।**
**ಜ್ಞಾನಂ ಯಸ್ಯ ತು ಚಕ್ಷುರಾದಿಕರಣದ್ವಾರಾ ಬಹಿಃ ಸ್ಪಂದತೇ ॥**

"ಅನೇಕ ರಂಧ್ರಗಳುಳ್ಳ ಮಡಕೆಯ ಮಧ್ಯದಲ್ಲಿ ಇಟ್ಟಿರುವ ಉಜ್ವಲವಾದ ದೀಪದ ಪ್ರಭೆಯು ಪ್ರಕಾಶಿಸುವ ಹಾಗೆ ಜ್ಞಾನವು ಕಣ್ಣು ಮೊದಲಾದ ಇಂದ್ರಿಯಗಳ ಮುಖಾಂತರ ಹೊರಗಡೆ ಸ್ಪಂದಿಸುತ್ತದೆ." ಆದ್ದರಿಂದಲೇ ಆತ್ಮನನ್ನು ಜ್ಞಾನಸ್ವರೂಪ ಎಂದು ಕರೆದಿರುವುದು.

### ವಿವಿಧ ಜ್ಞಾನಸಿದ್ಧಾಂತಗಳು

ಜ್ಞಾನವು ಅಸಾಧ್ಯ ಎಂದು ಜ್ಞಾನವನ್ನು ಸಂಪೂರ್ಣ ಅಲ್ಲಗಳೆಯುವುದರಿಂದ ಹಿಡಿದು ಜ್ಞಾನವೇ ಸರ್ವಸ್ವ, ಅದೇ ಸತ್ಯ ಎಂದು ಹೇಳುವುದರವರೆಗೆ ಜ್ಞಾನವನ್ನು ಕುರಿತಾದ ಅನೇಕ ಸಿದ್ಧಾಂತಗಳಿವೆ. ಒಂದು ತುದಿಯಲ್ಲಿ ಬೌದ್ಧರು, ವಿಶೇಷವಾಗಿ ಶೂನ್ಯವಾದಿಗಳು, ಜ್ಞಾನದ ಸಾಧ್ಯತೆಯನ್ನೇ ಪ್ರಶ್ನಿಸುತ್ತಾರೆ. ಅವರ ದೃಷ್ಟಿಯಲ್ಲಿ ಎಲ್ಲವೂ ಕ್ಷಣಿಕ—ಯಾವುದೂ ಒಂದು ಕ್ಷಣಕ್ಕಿಂತ ಹೆಚ್ಚು ಕಾಲ ಇರುವುದಿಲ್ಲ. ನಾವು ಒಂದು ವಸ್ತುವನ್ನು ತಿಳಿಯುವ ಹೊತ್ತಿಗೆ ಆ ವಸ್ತು ಅಲ್ಲಿರುವುದೇ ಇಲ್ಲ. ಆದ್ದರಿಂದ ನಮ್ಮ ಜ್ಞಾನವೆಲ್ಲ ಇಲ್ಲದಿರುವುದರದು. ಅಂದರೆ ಯಥಾರ್ಥ ಜ್ಞಾನವು ಸಾಧ್ಯವಿಲ್ಲ. ಮನಸ್ಸೂ ಕ್ಷಣಿಕವಾದುದರಿಂದ ಯಾವುದೇ ನಿರ್ದಿಷ್ಟ ಜ್ಞಾನವನ್ನೂ ಊಹಿಸಲಾಗುವುದಿಲ್ಲ. ಒಂದು ಜ್ಞಾನವು ಉಂಟಾಗುತ್ತಿರುವಂತೆಯೇ ಮನಸ್ಸೂ ಬದಲಾಗುತ್ತಿರುತ್ತದೆ, ಹೊರಗಿನ ವಸ್ತುವು ಆಗಲೇ ಬದಲಾಗಿರುತ್ತದೆ. ಆದ್ದರಿಂದ ನಮಗುಂಟಾಗುವ ಜ್ಞಾನವು ಯಾವುದರದು ಎಂದು ನಿರ್ದಿಷ್ಟವಾಗಿ ಹೇಳಲಾಗುವುದಿಲ್ಲ. ಹಾಗೆ ಹೇಳುವುದಕ್ಕೆ ಮುಂಚೆಯೇ ಅದೂ ಬದಲಾಗಿರುತ್ತದೆ. ಎಲ್ಲವೂ ಘಟನೆಗಳ ನಿರಂತರ ಸ್ರೋತ ಅಷ್ಟೇ. ಒಂದರ ಜ್ಞಾನವನ್ನು ಮತ್ತೊಂದು ಪಡೆಯುವುದೆಂಬುದು ಸಾಧ್ಯವೇ ಇಲ್ಲ.

ಇದಕ್ಕೆ ವಿರುದ್ಧವಾಗಿ ಅದ್ವೈತಿಗಳು ಹೇಳುತ್ತಾರೆ ಜ್ಞಾನವೇ ಸತ್ಯ ಎಂಬುದಾಗಿ. ಜ್ಞಾನದ ಕ್ಷಣಿಕತೆಯನ್ನು ಅರಿಯುವುದಕ್ಕೆ ನಿತ್ಯವಾದ ಸತ್ಯದ ಹಿನ್ನೆಲೆ ಆವಶ್ಯಕ. ನದಿಯ ಪ್ರವಾಹದಲ್ಲಿ ತೇಲಿಕೊಂಡು ಹೋಗುತ್ತಿರುವವನು ಆ ಪ್ರವಾಹದ ಸ್ವರೂಪವನ್ನು ಅರಿಯಲಾರ. ಪ್ರವಾಹದ ಹೊರಗೆ ನಿಶ್ಚಲವಾಗಿ ನಿಂತಿರುವವನು ಅರಿಯಬಲ್ಲ. ಹಾಗೆಯೇ ಘಟನೆಗಳ ನಿರಂತರ ಸ್ರೋತವನ್ನು ಸಾಕ್ಷಿಯಂತೆ ವೀಕ್ಷಿಸುವವನೊಬ್ಬನು ಇರಬೇಕು.

ಅವನೇ ಸರ್ವದೃಕ್, ಎಲ್ಲ ಜ್ಞಾನವೂ ಅವನಿಗೆ ಸೇರಿದುದು, ಅವನೇ ಜ್ಞಾನಸ್ವರೂಪ. ಎಲ್ಲ ಜ್ಞಾನದ ಮೂಲವೂ ಅವನೇ (**ಬ್ರಹ್ಮವಿದ್ಯಾಂ ಸರ್ವವಿದ್ಯಾಪ್ರತಿಷ್ಠಾಂ**—ಮುಂ.ಉ. ೧.೧.೧). ಮುಂಡಕೋಪನಿಷತ್ತಿನ ಮೂರನೇ ಶ್ಲೋಕವೂ ಇದೇ ಅರ್ಥವನ್ನು ಸೂಚಿಸುತ್ತದೆ. ಅಲ್ಲಿ ಶಿಷ್ಯನು ಗುರುವನ್ನು "ಹೇ ಭಗವನ್, ಯಾವುದನ್ನು ತಿಳಿದುಕೊಂಡರೆ ಇದೆಲ್ಲವನ್ನೂ ತಿಳಿದಂತಾಗುವುದು?" ಎಂದು ಪ್ರಶ್ನಿಸುತ್ತಾನೆ.

**ಜ್ಞಾನದ ಮಿತಿ**

ಯಾವುದನ್ನು ನಾವು ಸಾಮಾನ್ಯವಾಗಿ ಜ್ಞಾನವೆಂದು ಕರೆಯುತ್ತೇವೆಯೊ ಅದು ಅಜ್ಞಾನವೇ ಎನ್ನುತ್ತಾರೆ ಕೆಲವರು. ಏಕೆಂದರೆ ನಿಜವಾದ ವಸ್ತುಜ್ಞಾನ ಸಾಧ್ಯವೇ ಇಲ್ಲ. ನಾವು ಒಂದು ವಸ್ತುವನ್ನು ತಿಳಿಯುವುದೆಂದರೆ ನಮ್ಮ ಮಾನಸಿಕ ಭಾವನೆಗಳನ್ನು ಅದರಮೇಲೆ ಆರೋಪಿಸುವುದು. ನಿಜವಾಗಿ ವಸ್ತು ಹೇಗಿದೆಯೆಂಬುದು ನಮಗೆ ತಿಳಿಯದು. ನಮಗೆ ಇನ್ನೊಂದು ಇಂದ್ರಿಯವಿದ್ದರೆ ಅಥವಾ ಬೆಳಕಲ್ಲದೆ ಬೇರೆ ವಿಕಿರಣಗಳನ್ನು ಗ್ರಹಿಸುವ ಸಾಮರ್ಥ್ಯವಿದ್ದರೆ ಜಗತ್ತು ಆಗ ನಮಗೆ ಸಂಪೂರ್ಣವಾಗಿ ಬೇರೆಯಾಗಿ ಕಾಣುತ್ತದೆ. ಆದ್ದರಿಂದ ನಮಗೆ ತಿಳಿದಿರುವುದೆಲ್ಲವೂ ವಾಸ್ತವದಿಂದ ಬಹುದೂರವಾದುದು—ಅದು ಏನಾಗಿಲ್ಲವೊ ಅದು. ಅಜ್ಞಾನದಲ್ಲೇ ನಮ್ಮ ಎಲ್ಲ ವ್ಯವಹಾರವೂ ನಡೆಯುತ್ತಿರುವುದು. ಇನ್ನೊಂದು ದೃಷ್ಟಿಯಿಂದ ನೋಡಿದರೆ, ನಾವು ವಸ್ತುವನ್ನು ತಿಳಿಯುವುದೆಂದರೆ ಅದನ್ನು ನಮ್ಮ ಅರಿವಿನ ಮಿತಿಗೆ ಒಳಪಡಿಸುವುದು. ಆದ್ದರಿಂದಲೇ "ಜ್ಞಾನವೆಂದರೆ ಒಂದು ಮಿತಿ" ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ವೈಜ್ಞಾನಿಕ ಸಿದ್ಧಾಂತಗಳೂ ಆಯಾಯ ವಿಜ್ಞಾನಿಗಳ ಮಾನಸಿಕ ಬಣ್ಣದಿಂದ ಕೂಡಿರುತ್ತವೆ. ಆಲ್ಬರ್ಟ್ ಐನ್‌ಸ್ಟೈನ್ ಹೇಳುತ್ತಾರೆ: "ಭೌತಜಗತ್ತಿಗೆ ಸಂಬಂಧಿಸಿದ ನಮ್ಮ ವಿಚಾರಗಳೆಲ್ಲವೂ ಮಾನವ ಮನಸ್ಸಿನ ಮುಕ್ತಸೃಷ್ಟಿ, ಮತ್ತು ಅವು ಎಷ್ಟೇ ಸತ್ಯವಾಗಿ ಕಂಡರೂ ಬಾಹ್ಯಜಗತ್ತನ್ನು ಪ್ರತಿನಿಧಿಸುವುದಿಲ್ಲ. ತನ್ನ ಚಿತ್ರವನ್ನು ವಾಸ್ತವಾಂಶದೊಡನೆ ಮನಸ್ಸು ಹೋಲಿಸಿ ನೋಡಲಾರದು, ಅಂಥ ಹೋಲಿಕೆಯ ಅರ್ಥವನ್ನೂ ಅದು ಕಲ್ಪಿಸಿಕೊಳ್ಳಲಾರದು."

**ಜಗತ್ತು ಮನಸ್ಸಿನ ದೃಶ್ಯ**

ಗ್ರೀಕ್ ತತ್ತ್ವಜ್ಞಾನಿ ಪ್ಲೇಟೊ ಪ್ರಕಾರ, ನಾವು ಯಾವುದೇ ಒಂದು ವಸ್ತುವನ್ನು ಗುರುತಿಸಬೇಕಾದರೂ ಆ ವಸ್ತುವಿನ ಭಾವನೆ (idea) ನಮ್ಮ ಮನಸ್ಸಿನಲ್ಲಿರಬೇಕು. ಇಲ್ಲದಿದ್ದರೆ ಅದನ್ನು ಗುರುತಿಸಲಾಗುವುದಿಲ್ಲ. ಇದೊಂದು ಪುಸ್ತಕ ಎಂದು ನಮಗೆ ತಿಳಿಯಬೇಕಾದರೆ ಪುಸ್ತಕದ ಸಾಮಾನ್ಯ ಭಾವನೆ (universal idea of the book) ನಮ್ಮ ಮನಸ್ಸಿನಲ್ಲಿರಬೇಕು. ಹಾಗೆಯೇ ಪ್ರತಿಯೊಂದೂ ಕೂಡ. ಯಾವುದೊ ಒಂದು ಹೊಸ ವಸ್ತುವನ್ನು ನೋಡಿದಾಗ ಅದರ ಬಗ್ಗೆ ನಮಗೆ ಏನೂ ತಿಳಿಯುವುದಿಲ್ಲ. ಆದರೂ "ಇದು ಯಾವುದೊ ಒಂದು ವಸ್ತು" ಎಂದಷ್ಟೇ ತಿಳಿಯುತ್ತದೆ. ಆ ಜ್ಞಾನವೂ ಕೂಡ ವಸ್ತು-ಸಾಮಾನ್ಯ ಭಾವನೆ (universal idea of object)ಯಿಂದ. ಯಾರೊ ಒಬ್ಬರು ಬಂದು ಅದು ಯಾವ ವಸ್ತು ಎಂದು ತಿಳಿಸಿಕೊಡುತ್ತಾರೆ ಎಂದಿಟ್ಟುಕೊಳ್ಳೋಣ. ಆಗಲೂ ಅದಕ್ಕೆ ಸಂಬಂಧಪಟ್ಟ ಎಷ್ಟೊ ಸಾಮಾನ್ಯ ಭಾವನೆಗಳು ನಮ್ಮ ಮನಸ್ಸಿನಲ್ಲಿ ಆಗಲೇ ಇರುವುದರಿಂದ ಅವರು ಹೇಳುವುದು ಅರ್ಥವಾಗಿ, ಆ ವಸ್ತು ಏನೆಂಬುದು ನಮಗೆ ತಿಳಿಯುತ್ತದೆ.

ಅಂದರೆ ನಮ್ಮ ಮನಸ್ಸಿನೊಳಗೆ ಇಲ್ಲದಿರುವುದಾವುದನ್ನೂ ನಾವು ಹೊರಗೆ ನೋಡಲಾರೆವು. ಮನುಷ್ಯಸಾಮಾನ್ಯ ಭಾವನೆ ನಮ್ಮೊಳಗಿಲ್ಲದಿದ್ದರೆ ನಾವು ಹೊರಗಡೆ ಮನುಷ್ಯನನ್ನು ನೋಡಲಾರೆವು, ವಸ್ತುಸಾಮಾನ್ಯ ಭಾವನೆ ನಮ್ಮೊಳಗಿಲ್ಲದಿದ್ದರೆ ನಮಗೆ ಯಾವ ವಸ್ತುವೂ ಹೊರಗೆ ಕಾಣಿಸುವುದೇ ಇಲ್ಲ. **ಮನೋದೃಶ್ಯಮಿದಂ ದ್ವೈತಂ ಯತ್ಕಿಂಚ ಸಚರಾಚರಂ**—"ಸಚರಾಚರವಾದ ಈ ದ್ವೈತ ಜಗತ್ತು ಮಾನಸಿಕ ದೃಶ್ಯವೇ" ಎಂಬ ಮಾತೂ ಇದನ್ನೇ ಸಮರ್ಥಿಸುತ್ತದೆ. ಏನೊ ಒಂದು ಸತ್ಯವಿದೆ, ಅದೇನೆಂಬುದು ನಮಗೆ ತಿಳಿಯದು. ಅದರ ಮೇಲೆ ದೃಶ್ಯಜಗತ್ತನ್ನು ಆರೋಪಿಸಿ ನೈಸರ್ಗಿಕವಾದ ಲೋಕವ್ಯವಹಾರ (**ನೈಸರ್ಗಿಕೋಽಯಂ ಲೋಕವ್ಯವಹಾರಃ**—*ಬ್ರಹ್ಮಸೂತ್ರ ಭಾಷ್ಯ* ೧.೧.೧) ನಡೆಯುತ್ತಿದೆ.

**ಒಟ್ಟು ತಾತ್ಪರ್ಯ**

ಈಗ ಮುಖ್ಯವಾಗಿ ಎರಡು ದೃಷ್ಟಿಕೋನಗಳು ನಮ್ಮ ಮುಂದೆ ಇವೆ: (೧) **ಜ್ಞಾನವೆಂದರೆ ಅಧ್ಯಾರೋಪ** ಮತ್ತು (೨) **ಜ್ಞಾನವೆಂದರೆ ಆತ್ಮನ ಬೆಳಕು**. ಮನಸ್ಸಿನ ಭಾವನೆಗಳು ಹೊರಜಗತ್ತಿನ ಮೇಲೆ ಅಧ್ಯಾರೋಪವಾಗಿ ಆತ್ಮನ ಬೆಳಕಿನಿಂದ ಅದರ ಅರಿವು ನಮಗುಂಟಾಗುತ್ತದೆ ಎಂದು ಹೇಳಬಹುದು. ಒಂದು ಉದಾಹರಣೆಯ ಮೂಲಕ ಇದನ್ನು ಈ ರೀತಿ ವಿವರಿಸಬಹುದು. ವಿವಿಧ ಭಾವನೆಗಳಿಂದ ಕೂಡಿದ ಮನಸ್ಸನ್ನು ಒಂದು ಫಿಲ್ಮ್‌ನ ಸುರುಳಿಯೆಂದು ಇಟ್ಟುಕೊಳ್ಳೋಣ. ಈ ಫಿಲ್ಮ್‌ನ ಚಿತ್ರಗಳು ಮೆದುಳೆಂಬ ಪ್ರೊಜೆಕ್ಟರ್ ಮೂಲಕ ಹೊರ ಜಗತ್ತಿನ ದೃಶ್ಯಗಳಾಗಿ ಪ್ರದರ್ಶನಗೊಳ್ಳುತ್ತಿವೆ. ಈ ಪ್ರದರ್ಶನಕ್ಕೆ ಹಿಂದಿರುವ ಬೆಳಕೇ ಆತ್ಮಜ್ಯೋತಿ. ಫಿಲ್ಮಿನ ಮೂಲಕ ಹೋಗುವ ವಿದ್ಯುತ್ ಬೆಳಕು ಪರದೆಯ ಮೇಲೆ ದೃಶ್ಯಗಳಾಗಿ ಕಾಣುವುದು. ಹಾಗೆಯೇ ಮನಸ್ಸಿನ ಮೂಲಕ ಹೋಗುವ ಆತ್ಮಜ್ಯೋತಿಯೇ ದೃಶ್ಯ ಜಗತ್ತಾಗಿ ಕಾಣುವುದು. ಮನಸ್ಸಿನ ಭಾವನೆಗಳೇ ಜಗತ್ತಿಗೆ ರೂಪವನ್ನು ಕೊಡುವುದು. ಬೃಹದಾರಣ್ಯಕ ಉಪನಿಷತ್ತಿನಲ್ಲಿಯೂ ಇದೇ ಭಾವನೆ ವ್ಯಕ್ತವಾಗಿದೆ : **ಮನಸಾ ಹ್ಯೇವ ಪಶ್ಯತಿ ಮನಸಾ ಶೃಣೋತಿ.... ಸರ್ವಂ ಮನ ಏವ** —"ಮನಸ್ಸಿನಿಂದಲೇ ನೋಡುತ್ತಾನೆ, ಮನಸ್ಸಿನಿಂದಲೇ ಕೇಳುತ್ತಾನೆ ಮತ್ತು ನಮ್ಮ ಎಲ್ಲ ಅನುಭವಗಳೂ ಮಾನಸಿಕ ರೂಪಗಳೇ"(೧.೫.೩). ಮನಸ್ಸೆಂಬ ಫಿಲ್ಮ್ ಹೊರಟುಹೋದರೆ ಉಳಿಯುವುದು ಆತ್ಮಜ್ಯೋತಿಯೊಂದೇ. ಅದೇ ನಿಜವಾದ ಜ್ಞಾನ—ಪರಾವಿದ್ಯೆ, ಉಳಿದ ಜ್ಞಾನಗಳೆಲ್ಲ (ಅಪರಾವಿದ್ಯೆ) ಅದರ ವಿವಿಧ ಅಭಿವ್ಯಕ್ತಿಗಳು. ❋